**<u>ಅಸಲು ದಾವಾ ಸಂಖ್ಯೆ - 207/2021</u>** **ಪಿ.ಡಬ್ಲ್ಯೂ:-1**

ದಿನಾಂಕಃ 03-03-2025 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು :- ಪ್ರತಿವಾದಿ ಪರ ವಕೀಲರಿಂದ :-</u>

ನಿಪಿ-1 ಕ್ರಯ ಪತ್ರದ ಆಧಾರದ ಮೇಲೆ ನಮ್ಮ ತಂದೆ ಬಸಪ್ಪರವರು ಭೀಮಾಚಾರ್ ಮತ್ತು ಗುರುರಾಜಚಾರ್ ರವರಿಂದ ಹಳೇ ಸರ್ವೇ ನಂ.4, ಹೊಸ ಸರ್ವೇ ನಂ.4/21 ರಲ್ಲಿ 2 ಎಕರೆ 10 ಗುಂಟೆ ಜಮೀನನ್ನು ಖರೀದಿ ಮಾಡಿರುತ್ತಾರೆ. ನಿಪಿ-1 ಕ್ರಯ ಪತ್ರದ ಖರೀದಿದಾರರಾದ ಬಸಪ್ಪರವರು ನಮ್ಮ ತಂದೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ವಾದ ಪತ್ರದಲ್ಲಿ ನಿಪಿ-1 ಕ್ರಯ ಪತ್ರದ ಖರೀದಿದಾರರ ಹೆಂಡತಿ ಮತ್ತು ಮಕ್ಕಳ ಹೆಸರು ನಮೂದು ಮಾಡಿರುವುದಿಲ್ಲ. ನಿಪಿ-1 ಕ್ರಯ ಪತ್ರದ ಖರೀದಿದಾರರಾದ ಬಸಪ್ಪರವರಿಗೂ ಮತ್ತು ನನಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಬಸಪ್ಪರವರು ನಿಪಿ-2 ಕ್ರಯ ಪತ್ರದ ಆಧಾರದ ಮೇಲೆ 2 ಎಕರೆ 10 ಗುಂಟೆ ಜಮೀನಿನಲ್ಲಿ ತಮಗೆ 37 ½ ಅಡಿ ಜಾಗವನ್ನು ಇಟ್ಟುಕೊಂಡು ಉಳಿದ ಆಸ್ತಿಯನ್ನು ರಾಮಪ್ಪ ಬಿನ್ ತೀರ್ಥಪ್ಪ ಎಂಬುವವರಿಗೆ ಮಾರಾಟ ಮಾಡಿದ್ದಾರೆ. ನಿಪಿ-2 ದಾಖಲೆಯು ದಾವಾ ಆಸ್ತಿಯಲ್ಲಿ 37 ½ ಅಡಿ ಜಾಗವನ್ನು ಬಿಟ್ಟು ಉಳಿದ ಆಸ್ತಿಯನ್ನು ಮಾರಾಟ ಮಾಡಿದಂತ ದಾಖಲೆಯಾಗಿರುತ್ತದೆ. ನಿಪಿ-2 ದಾಖಲೆಯಲ್ಲಿ ಬಸಪ್ಪರವರು ತಾವು ಇಟ್ಟುಕೊಂಡ 37 ½ ಅಡಿ ಜಾಗದ ಚಕ್ಕುಬಂಧಿ ನಮೂದಾಗಿರುವುದಿಲ್ಲ. ದಾವಾ ಪತ್ರದಲ್ಲಿ ದಾವಾ ಆಸ್ತಿಯ ಚಕ್ಕುಬಂಧಿಗೆ ಸಂಬಂಧಪಟ್ಟಂತೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ, ಆದರೆ ನಾನು ದಾವಾ ಆಸ್ತಿಯನ್ನು ನೋಡಿ ಅದಕ್ಕೆ ಚಕ್ಕುಬಂಧಿಯನ್ನು ನಮೂದು ಮಾಡಿದ್ದೇನೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಚಕ್ಕುಬಂಧಿಗೆ ಸಂಬಂಧಿಸಿದಂತೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಪ್ರತಿವಾದಿ ರಾಮಪ್ಪ ಬಿನ್ ತೀರ್ಥಪ್ಪರವರಿಗೆ ಸೊಸೆಯಾಗಬೇಕು. ಪ್ರತಿವಾದಿ ರಾಮಪ್ಪನ

ಮಗ ಈಶ್ವರಪ್ಪನ ಹೆಂಡತಿಯಾಗಬೇಕು. ದಾವಾ ಆಸ್ತಿಯ ಮೂಲ ಮಾಲೀಕರು ರಾಮಪ್ಪರವರ ಎಂದರೆ ಸರಿಯಲ್ಲ. ಸರ್ವೆ ನಂ.4 ರ ಆಸ್ತಿಯಲ್ಲಿ 37 ½ ಅಡಿ ಜಾಗವನ್ನು ಬಿಟ್ಟು ಉಳಿದ ಆಸ್ತಿಯು ರಾಮಪ್ಪರವರ ಹೆಸರಿನಲ್ಲಿರುತ್ತದೆ. ಸರ್ವೆ ನಂ.4 ರ ಆಸ್ತಿಯ ಸಂಪೂರ್ಣ ಮಾಲೀಕರು ರಾಮಪ್ಪರವರು ಆಗಿದ್ದರು ಸಹ 37 ½ ಅಡಿ ಜಾಗವನ್ನು ಹೊರತುಪಡಿಸಿ ಉಳಿದ ಆಸ್ತಿಯ ಮಾಲೀಕರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದ ಪತ್ರದ ಪ್ಯಾರಾ ನಂ.6 ರಲ್ಲಿ ನಮೂದಾಗಿರುವ ವಿಚಾರಗಳನ್ನು ವಕೀಲರು ನಮೂದು ಮಾಡಿರುತ್ತಾರೆ. ಅದರಲ್ಲಿ ಏನು ಬರೆದಿದೆ ಎಂಬ ವಿಚಾರ ನನಗೆ ಗೊತ್ತಿಲ್ಲ. ಜಿ ಬಸಪ್ಪರವರು 37 ½ ಅಡಿ ಜಾಗವನ್ನು ಸರ್ವೆ ನಂ.4 ರಲ್ಲಿ ಇಟ್ಟುಕೊಂಡಿರುವ ಬಗ್ಗೆ ನಿಪಿ-2 ದಾಖಲೆಯನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಿಪಿ-3 ಆರ್ ಟಿ ಸಿ ಯಲ್ಲಿ ಸರ್ವೆ ನಂ.4/21 ರಲ್ಲಿ 5 ಗುಂಟೆ ಜಮೀನು ಪ್ರತಿವಾದಿಯ ಹೆಸರಿಗೆ ನಮೂದಾಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆ ಕಾರಣದಿಂದ ನಾನು ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. ನಿಪಿ-3 ರಲ್ಲಿ ಪ್ರತಿವಾದಿಯ ಹೆಸರಿಗೆ ನಮೂದಾಗಿರುವ ಆಸ್ತಿಯು ನಮ್ಮದೇ ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶಕೋರಿದ್ದು ನೀಡಿ ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.